ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ : ಸಿ5(1)ಅಧೀ.ಬಡ್ತಿ-44/2016-17 ದಿನಾಂಕ : 11/11/2016

## ಜ್ಞಾಪನ

ವಿಷಯ :- ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯದ ಆಡಳಿತ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಥಮ ದರ್ಜೆ ಸಹಾಯಕರು ಹಾಗೂ ಶೀಘ್ರಲಿಪಿಗಾರರಿಗೆ ಅಧೀಕ್ಷಕರ ಹುದ್ದೆಗೆ ಪದೋನ್ನತಿ ನೀಡುವ ಕುರಿತು.

ಉಲ್ಲೇಖ :- ಸರ್ಕಾರದ ಅಧಿಸೂಚನೆ ಸಂ.ಡಿಪಿಎಆರ್:12:ಎಸ್‌ಡಿಇ:2007, ದಿ:29.01.2008.

2] ಸರ್ಕಾರದ ಸುತ್ತೋಲೆ ಸಂ:ಇಡಿ:250:ಡಿಪಿಐ:2006, ದಿನಾಂಕ.22.02.2008.

3] ಸರ್ಕಾರದ ಆದೇಶ ಸಂಖ್ಯೆ: ಇಡಿ 36 ಮಾಹಿತಿ 2014 ದಿನಾಂಕ : 26/08/2015.

4] ಈ ಕಛೇರಿಯ ಅಧಿಸೂಚನೆ ಸಂಖ್ಯೆ : ಸಿ5(1)ಪ್ರ.ದ.ಸ., ಜ್ಯೇ.ಪಟ್ಟಿ.-01/2015-16 ದಿನಾಂಕ : 10/03/2016.

5] ಈ ಕಛೇರಿಯ ಅಧಿಸೂಚನೆ ಸಂಖ್ಯೆ : ಸಿ5(2)ಶೀ.ಲಿ.ಜ್ಯೇ.ಪಟ್ಟಿ.-39/2011-12 ದಿನಾಂಕ : 09/03/2016.

6] ಸರ್ಕಾರದ ಪತ್ರ ಸಂಖ್ಯೆ : ಇಡಿ 36 ಮಾಹಿತಿ 2016 ದಿನಾಂಕ : 02/07/2016

7] ದಿನಾಂಕ: 09/11/2016 ರಂದು ನಡೆದ ಇಲಾಖಾ ಮುಂಬಡ್ತಿ ಸಭೆಯ ನಡಾವಳಿ.

* * * * *

*ಪ್ರಸ್ತಾವನೆ:*

ಸರ್ಕಾರದ ಉಲ್ಲೇಖ [1] ಮತ್ತು [2]ರ ಅಧಿಸೂಚನೆ ಮತ್ತು ಸುತ್ತೋಲೆಗಳನ್ವಯ ಬೆಂಗಳೂರು ಆಯುಕ್ತರ ನೇಮಕಾತಿ ಪ್ರಾಧಿಕಾರದ ವ್ಯಾಪ್ತಿಯಾದ ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಥಮ ದರ್ಜೆ ಸಹಾಯಕರುಗಳ ಮತ್ತು ಶೀಘ್ರಲಿಪಿಗಾರರ ಅಂತಿಮ ಜೇಷ್ಠತಾ ಪಟ್ಟಿಗಳನ್ನು ದಿನಾಂಕ : 01/01/2016 ರಲ್ಲಿದ್ದಂತೆ ಈ ಕಛೇರಿಯ ಅಧಿಸೂಚನೆಯ ಉಲ್ಲೇಖಿತ (4) ಮತ್ತು (5) ರಲ್ಲಿ ಹೊರಡಿಸಲಾಗಿದೆ. ಉಲ್ಲೇಖಿತ (3) ರ ಸರ್ಕಾರದ ಆದೇಶದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ ಪ್ರತಿ ಕಛೇರಿಗೆ ಒಂದು ಅಧೀಕ್ಷಕರ ಹುದ್ದೆಯಂತೆ ಒಟ್ಟು 204 ಹೊಸ ಹುದ್ದೆಗಳನ್ನು ಸೃಜಿಸಲಾಗಿದೆ ಹಾಗೂ ಉಲ್ಲೇಖಿತ (6) ರ ಸರ್ಕಾರದ ಪತ್ರದಲ್ಲಿ ಹೊಸದಾಗಿ ಸೃಜಿತವಾದ ಹುದ್ದೆಗಳಿಗೆ ವೇತನ ಆಕರಣೆಗೊಳಿಸುವ ಬಗ್ಗೆ ಸೂಚನೆಯನ್ನು ನೀಡಲಾಗಿದೆ. ಬೆಂಗಳೂರು ಆಯುಕ್ತಾಲಯದ ಆಡಳಿತ ವ್ಯಾಪ್ತಿಯಲ್ಲಿ ಹೊಸದಾಗಿ ಸೃಜಿತವಾದ 112 ಅಧೀಕ್ಷಕರ ಹುದ್ದೆಗಳು ಸೇರಿದಂತೆ ಲಭ್ಯವಾಗುವ ಅಧೀಕ್ಷಕರ ಖಾಲಿ ಹುದ್ದೆಗಳಿಗೆ ಸ್ಥಾನಾಪನ್ನ ಬಡ್ತಿ ನೀಡುವ ಬಗ್ಗೆ ಜಿಲ್ಲಾ ಉಪ ನಿರ್ದೇಶಕರುಗಳು ಸಲ್ಲಿಸಿದ್ದ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗಿದೆ. ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಅಧೀಕ್ಷಕರ ಹುದ್ದೆಗಳನ್ನು 35:1ರ ಅನುಪಾತದಂತೆ ಪ್ರ.ದ.ಸ ಹಾಗೂ ಶೀಘ್ರಲಿಪಿಗಾರರ ವೃಂದಗಳಿಂದ ಬಡ್ತಿಯನ್ನು ನೀಡುವುದರ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ. ಈ ಸಂಬಂಧ ಉಲ್ಲೇಖ(7)ರ ಇಲಾಖಾ ಮುಂಬಡ್ತಿ ಸಭೆಯ ನಡಾವಳಿಯಂತೆ ಪ್ರಸ್ತುತ ಲಭ್ಯವಿರುವ 173 ಅಧೀಕ್ಷಕರ ಖಾಲಿ ಹುದ್ದೆಗಳಿಗೆ ಅರ್ಹ ಪ್ರಥಮ ದರ್ಜೆ ಸಹಾಯಕರು ಹಾಗೂ ಶೀಘ್ರಲಿಪಿಗಾರರಿಗೆ ಸ್ಥಾನಪನ್ನ ಬಡ್ತಿ ನೀಡಲು ತೀರ್ಮಾನಿಸಲಾಗಿದೆ. ಅದರಂತೆ ಈ ಮುಂದಿನ ಆದೇಶ.